**ಓಎಸ್.ನಂ. : *8/2020***

**ಪಿಡಬ್ಲೂ : *01***

**ಇಂದು ದಿನಾಂಕ:*02.08.2024* ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ.ಸಿ.ಕೆ.ಎಂ ವಕೀಲರಿಂದಃ**

ನಾನು ಪದವಿ ವಿದ್ಯಾಭ್ಯಾಸ ಮಾಡಿದ್ದೇನೆ. ನನ್ನನ್ನು ಕರಿಯಪ್ಪ ಎಂತಲೂ ಕರೆಯುತ್ತಾರೆ ಎಂದರೆ ಸರಿಯಲ್ಲ. ನನ್ನ ತಾತನ ಹೆಸರು ಕರಿಯಪ್ಪ ಅವರನ್ನು ಕರೀಗೌಡರು ಎಂತಲೂ ಕರೆಯುತ್ತಿದ್ದರು ಎಂದರೆ ಸರಿ. ನನ್ನ ತಂದೆ ಮೂಲತಃ ಹರದೂರು ಗ್ರಾಮದವರು. ನನ್ನ ತಂದೆಗೆ ಇಬ್ಬರು ಪತ್ನಿಯರು. ನನ್ನ ತಂದೆಯ ಮೊದಲನೆಯ ಪತ್ನಿಯ ಹೆಸರು ಲಕ್ಷ್ಮಮ್ಮ ಎಂದರೆ ಸರಿಯಲ್ಲ ಯಲ್ಲಮ್ಮ. ನನ್ನ ತಂದೆಯ ಎರಡನೇ ಪತ್ನಿಯ ಹೆಸರು ಶಿವಮ್ಮ ಎಂದರೆ ಸರಿ. ನಾನು ಲಕ್ಷ್ಮಮ್ಮನ ಮಗ ಎಂದರೆ ಸರಿಯಲ್ಲ ಯಲ್ಲಮ್ಮನ ಮಗ. ನನ್ನ ತಾಯಿಯ ಹೆಸರು ಯಲ್ಲಮ್ಮ ಎಂದು ತೋರಿಸುವ ದಾಖಲೆ ಇದೆ. ನನ್ನ ತಾಯಿ ಯಲ್ಲಮ್ಮ ಜೀವಂತ ಇದ್ದಾರೆ. ಈ ಕೇಸು ಸಲ್ಲಿಸುವ ಕಾಲಕ್ಕೆ ನನ್ನ ತಾಯಿ ಇರುವ ಬಗ್ಗೆ ನಮ್ಮ ವಕೀಲರಿಗೆ ಮಾಹಿತಿ ಕೊಟ್ಟಿದ್ದೇನೆ. ನನ್ನ ಅಕ್ಕ , ಅಕ್ಕಯ್ಯಮ್ಮ ಅವರು ಸಹ ಬದುಕಿದ್ದಾರೆ. ಸದರಿ ಅಕ್ಕಯ್ಯಮ್ಮ ವಿ.ಜಿ.ಕೊಪ್ಪಲು, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆಯಲ್ಲಿದ್ದಾರೆ. ಅಕ್ಕಯ್ಯಮ್ಮನ ಗಂಡನ ಹೆಸರು ಶಿವಣ್ಣ. ಅಕ್ಕಯ್ಯಮ್ಮ ರವರ ಬಗ್ಗೆಯೂ ಸಹ ದಾವೆ ಸಲ್ಲಿಸುವ ಕಾಲಕ್ಕೆ ನಮ್ಮ ವಕೀಲರಿಗೆ ಮಾಹಿತಿ ಕೊಟ್ಟಿದ್ದೇನೆ. ಅಕ್ಕಯ್ಯಮ್ಮನಿಗೆ 58 ವರ್ಷ ಆಗಿದೆ.

ಶಿವಮ್ಮ ನನ್ನ ತಂದೆಯ 2 ನೇ ಪತ್ನಿ ಎಂಬ ಬಗ್ಗೆ ದಾವೆ ಸಲ್ಲಿಸುವ ಕಾಲಕ್ಕೆ ನಮ್ಮ ವಕೀಲರಿಗೆ ಮಾಹಿತಿ ಕೊಟ್ಟಿದ್ದೇನೆ. ಸದರಿ ಶಿವಮ್ಮರವರಿಗೆ ಗೋವಿಂದ ಮತ್ತು ಜಯಲಕ್ಷ್ಮೀ ಎಂಬ ಇಬ್ಬರು ಮಕ್ಕಳು ಹುಟ್ಟಿದ್ದರಂತೆ ಆದರೆ ಎಂದರೆ ನನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದೆ ಇರುವ ಜಯಲಕ್ಷ್ಮೀ ಶಿವಮ್ಮನ ಮಗಳು ಎಂದರೆ ಸರಿ. ಸದರಿ ಜಯಲಕ್ಷ್ಮೀ ರವರ ವಿರುದ್ಧವೂ ಸಹ ಆಸ್ತಿ ವಿಭಾಗಕ್ಕಾಗಿ ಕೇಸು ಹಾಕಿದ್ದೇನೆ ಎಂದರೆ ಸರಿ. ನನ್ನ ಮಲಸಹೋದರ ಗೋವಿಂದ ಮೃತಪಟ್ಟಿದ್ದಾರೆ ಎಂದರೆ ಸರಿ. ಸದರಿ ಗೋವಿಂದರವರ ಹೆಂಡತಿ ಸರಸ್ವತಿ ಎಂದರೆ ಸರಿ. ಗೋವಿಂದ ಮತ್ತು ಸರಸ್ವತಿಯವರಿಗೆ ಪುಷ್ಪಲತಾ, ಪುನೀತಕುಮಾರ ಮತ್ತು ಅಪ್ಪು ಎಂಬ ಮಕ್ಕಳಿದ್ದಾರೆ ಎಂದರೆ ಸರಿ. ಕೇಸು ಹಾಕುವ ಕಾಲಕ್ಕೆ ಗೋವಿಂದರವರ ಮೃತಪಟ್ಟಿದ್ದಾರೆ ಮತ್ತು ಅವರ

ಮಕ್ಕಳು ಇದ್ದಾರೆ ಎಂದು ನಮ್ಮ ವಕೀಲರಿಗೆ ಮಾಹಿತಿ ಕೊಟ್ಟಿದ್ದೆ. ನನ್ನ ವಾದಪತ್ರದಲ್ಲಿ ನನ್ನ ತಂದೆಯ ಮೊದಲನೆಯ ಪತ್ನಿ ಯಲ್ಲಮ್ಮ ಹಾಗೂ 2 ನೇ ಪತ್ನಿ ಶಿವಮ್ಮ ಎಂದು ಬರೆಸಿದ್ದೇನೆ. ನನ್ನ ತಂದೆಯ ತಾಯಿಯ ಹೆಸರು ತಿಮ್ಮಮ್ಮ. ನನ್ನ ತಾತ ಕರಿಯಪ್ಪ ಅಲಿಯಾಸ್ ಕರಿಗೌಡ ಮೃತಪಟ್ಟು ಎಷ್ಟು ವರ್ಷ ಆಯಿತು ಎಂದು ಗೊತ್ತಿಲ್ಲ ಏಕೆಂದರೆ ನಾನು ಹುಟ್ಟುವ ಮೊದಲೇ ಅವರು ಮೃತಪಟ್ಟಿದ್ದರು. ನನ್ನ ತಾತ ಮೃತಪಟ್ಟ ನಂತರ ಕುಟುಂಬದ ಯಜಮಾನಿಕೆಯನ್ನು ನನ್ನ ತಂದೆ ಮತ್ತು ಅಜ್ಜಿ ನಿರ್ವಹಣೆ ಮಾಡಲು ಪ್ರಾರಂಭಿಸಿದ್ದರು ಎಂದರೆ ಸರಿ. ಆನಂತರ ನನ್ನ ತಾಯಿ ಮತ್ತು ಶಿವಮ್ಮ ರವರ ಕುಟುಂಬದ ನಡುವೆ ಹೊಂದಾಣಿಕ ಇಲ್ಲದೇ ವೈಮನಸ್ಸು ಉಂಟಾಯಿತು ಎಂದರೆ ಗೊತ್ತಿಲ್ಲ. ಆ ಸಂದರ್ಭದಲ್ಲಿ ನನ್ನ ತಂದೆ ಮತ್ತು ಅಜ್ಜಿ ಕುಟುಂಬದಲ್ಲಿ ವಿಭಾಗ ಮಾಡಿಕೊಂಡಿದ್ದರು ಎಂದರೆ ಗೊತ್ತಿಲ್ಲ. ಆ ಸಂದರ್ಭದಲ್ಲಿ ನಾನು ನನ್ನ ತಾಯಿ ಮತ್ತು ನನ್ನ ಅಜ್ಜಿ ತಿಮ್ಮಮ್ಮ ಒಟ್ಟಾಗಿ ವಾಸವಿದ್ದೇವೆ ಎಂದರೆ ಗೊತ್ತಿಲ್ಲ. ಆಗ ನನ್ನ ಅಜ್ಜಿ ನನ್ನನ್ನು ಮತ್ತು ನನ್ನ ತಾಯಿಯನ್ನು ಪೋಷಣೆ ಮಾಡುತ್ತಿದ್ದರು ಎಂದರೆ ಸುಳ್ಳು. ಆ ಸಂದರ್ಭದಲ್ಲಿ ನನ್ನ ತಂದೆ ಮತ್ತು ಶಿವಮ್ಮ ಇನ್ನೊಂದು ಕುಟುಂಬದಲ್ಲಿ ವಾಸ ಮಾಡುತ್ತಿದ್ದರು ಎಂದರೆ ಗೊತ್ತಿಲ್ಲ. ನನ್ನ ತಂದೆ ಅವರ 2 ನೇ ಹೆಂಡತಿ ಮತ್ತು ಅವರ ಮಕ್ಕಳನ್ನು ಪೋಷಣೆ ಮಾಡುತ್ತಿದ್ದರು ಎಂದರೆ ಸರಿ. ದಿನಾಂಕ 06.09.1989 ರಲ್ಲಿ ನನ್ನ ಅಜ್ಜಿ ಮತ್ತು ತಂದೆ ಕುಟುಂಬದ ಎಲ್ಲಾ ಆಸ್ತಿಗಳನ್ನು ನೊಂದಣಿ ವಿಭಾಗ ಪತ್ರದ ಮೂಲಕ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಗೊತ್ತಿಲ್ಲ, ನಾನು ಸಹಿ ಹಾಕಿಲ್ಲ.

**ಮುಂದುವರಿದ ಪಾಟೀ ಸವಾಲು ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

**ಓ.ಹೆ.ಕೆ.ಸರಿ ಇದೆ.**

**ಹಿ.ಸಿ.ನ್ಯಾ. ಮತ್ತು ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ**